ದಿನಾಂಕಃ29-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಕೆ ಎನ್ ಜೆ ವಕೀಲರಿಂದ ಃ-**

ನನ್ನ ತಾತನ ಹೆಸರು ಮೂಕಸಂಜೀವಪ್ಪ, ಅವರಿಗೆ ನರಸಪ್ಪ ಮತ್ತು ಹನುಮಪ್ಪ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಸಂಜಕ್ಕ, ಸಿದ್ದಕ್ಕ , ಲಕ್ಷ್ಮಮ್ಮ ಎಂಬ 3 ಜನ ಹೆಣ್ಣು ಮಕ್ಕಳು. ನರಸಪ್ಪನಿಗೆ ಒಬ್ಬನೇ ಮಗ ಆತನ ಹೆಸರು ನರಸಪ್ಪ, ಹನುಮಪ್ಪನಿಗೆ ನಾನು ಮತ್ತು ವಾದಿ ಇಬ್ಬರು ಮಕ್ಕಳು. ನರಸಪ್ಪನಿಗೆ ಜಯರಾಮ್ ಮತ್ತು ನಾಗರಾಜ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಸಿದ್ದಲಕ್ಷ್ಮಮ್ಮ ಎಂಬ ಒಬ್ಬಳು ಹೆಣ್ಣು ಮಗಳು. ನರಸಪ್ಪ ಹೆಂಡತಿ ಮುದ್ದಕ್ಕ ಜೀವಂತ ಇದ್ದಾರೆ. ನನ್ನ ತಾತನಿಗೆ ಸರ್ವೆ ನಂ.81, 82, 83, 84 ಮತ್ತು 85 ರ ವೀರ್ಲಗೊಂದಿ ಗ್ರಾಮದ ಜಮೀನುಗಳು ಇದ್ದವು. ದಾವಾ ಸ್ವತ್ತುಗಳು ಮೊದಲು ಮೂಕಸಂಜೀವಪ್ಪನ ಹೆಸರಿನಲ್ಲಿದ್ದವು. ಸಾಕ್ಷಿ ಮುಂದುವರೆದು ಅವರು ಮಕ್ಕಳು ಒಟ್ಟು ಕುಟುಂಬದಿಂದ ಬೇರೆಯಾದಾಗ ಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನರಸಪ್ಪ ಬಿನ್ ನರಸಪ್ಪ ಮೃತಪಟ್ಟು 6 ವರ್ಷವಾಗಿದೆ. 1980 ರಲ್ಲಿ ಮ್ಯುಟೇಷನ್ ಆಗಿರುತ್ತದೆ. ಮ್ಯುಟೇಷನ್ ಆಗಿರುತ್ತದೆ 1987 ರಲ್ಲಿ ಸ್ವತ್ತುಗಳು ವಿಭಾಗ ಮಾಡಿಕೊಂಡಿರುತ್ತಾರೆ. ನನ್ನ ತಾತನಿಗೆ ಸೇರಿದ ಎಲ್ಲಾ ಸರ್ವೆ ನಂಬರ್‌ಗಳಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. 1980 ರಲ್ಲಿ ನರಸಪ್ಪನಿಗೆ ಅರ್ಧ ಭಾಗ, ಉಳಿದ ಅರ್ಧ ಭಾಗದಲ್ಲಿ ನಾನು ಮತ್ತು ವಾದಿ ಸಮಭಾಗ ತೆಗೆದುಕೊಂಡಿರುತ್ತೇವೆ. 1980 ರಲ್ಲಿ ಆಗಿರುವ ಮ್ಯುಟೇಷನ್ ನಂಬರ್ ನನಗೆ ಹೇಳಲು ಬರುವುದಿಲ್ಲ, 1980 ರಲ್ಲಿ ಮ್ಯುಟೇಷನ್ ಆದಾಗ ನರಸಪ್ಪ ಜೀವಂತ ಇದ್ದರು ಸಾಕ್ಷಿ ಮುಂದುವರೆದು ಪಾರಿಕತ್ ಆದಾಗಲೂ ಆತ ಜೀವಂತ ಇದ್ದ ಎಂದು ನುಡಿಯುತ್ತಾರೆ. ಸದರಿ ಮ್ಯುಟೇಷನ್‌ನಲ್ಲಿ ನರಸಪ್ಪನ ಹೆಸರು ನಮೂದಾಗಿರುತ್ತದೆ. ಸದರಿ ಮ್ಯುಟೇಷನ್ ನ್ಯಾಯಾಲಯಕ್ಕೆ ಸಲ್ಲಿಸಿರಬಹುದು. 1980 ಮ್ಯುಟೇಷನ್ ಆದಾಗ ವಾದಿಯು ಸಹ ನನ್ನ ಜೊತೆ ಇದ್ದ. ಸದರಿ ಮ್ಯುಟೇಷನ್‌ನಲ್ಲಿ ನರಸಪ್ಪನಿಗೆ ಅಂದಾಜು 10 ಎಕರೆ ನನಗೂ ಮತ್ತು ವಾದಿಗೆ ತಲಾ 5 ಎಕರೆ

ಬಂದಿರುತ್ತದೆ. 1980 ರ ಮುಟೇಪನ್ ಆದಾಗ ನರಸಪ್ಪ ಬಿನ್ ನರಸಪ್ಪನಿಗೆ ಯಾವುದೇ ಸ್ವತ್ತು ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೂ ಸಹ ಸದರಿ ಮುಟೇಷನ್ ಪ್ರಕಾರ ಖಾತೆ ಬದಲಾವಣೆಯಾಗಿದೆ. 1980 ರ ಮುಟೇಷನ್ ಆಗುವ ಪೂರ್ವದಲ್ಲಿ ಕಂದಾಯ ದಾಖಲೆಗಳು ನನ್ನ ತಾತನ ಹೆಸರಿನಲ್ಲಿದ್ದವು. ನನ್ನ ತಾತ ಮೃತಪಟ್ಟಾಗ ನಾವು ಚಿಕ್ಕಮಕ್ಕಳು. 1980 ರ ವಿಭಾಗ ಆಗುವ ಸಮಯದಲ್ಲಿ ವಿಭಾಗ ಪತ್ರ ಬರೆದುಕೊಂಡಿದ್ದೆವು. ಅದನ್ನು ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಗೊತ್ತಿಲ್ಲ ಆದರೆ ನಾನು ಅದನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೆ. ಸಾಕ್ಷಿ ಮುಂದುವರೆದು 1987 ರಲ್ಲಿ ಪಾರಿಕತ್ ಪತ್ರ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ವಾದಿ ಅಂದಾಜು 2ನೇ ತರಿಗತಿ ಓದಿರಬಹುದು. ಆದರೆ ಆತ ಸಹಿ ಮಾಡುತ್ತಿರಲಿಲ್ಲ ಆದರೆ ದಾಖಲೆಗಳಿಗೆ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದ. ನಾನು ಶಾಲೆಗೆ ಹೋಗಿರುವುದಿಲ್ಲ. 1987 ರಲ್ಲಿ ಆದ ವಿಭಾಗ ನರಸಪ್ಪ ಬಿನ್ ನರಸಪ್ಪ, ನನ್ನ ಮತ್ತು ವಾದಿಯ ನಡುವೆ ಆಗಿರುತ್ತದೆ. ಆ ಸಮಯದಲ್ಲಿ ಸಾಕ್ಷಿದಾರರಾಗಿ ಎಸ್ ನರಸಪ್ಪ , ಅಶ್ವಥೇಗೌಡ, ನಾರಾಯಣಗೌಡ , ಆರ್ ಸಿದ್ದಪ್ಪ , ರೆಡ್ಡಿ ನರಸಪ್ಪ ಎಂಬುವವರು ಇದ್ದರು ಇವರ ಪೈಕಿ ಅಶ್ವಥೇಗೌಡ ಜೀವಂತವಿದ್ದಾರೆ. ಸದರಿ ವಿಭಾಗದಲ್ಲಿ ಸರ್ವೆ ನಂ.81 ರಿಂದ 86 ರ ಜಮೀನುಗಳಲ್ಲಿ ನನಗೆ ಒಟ್ಟು 4 ಎಕರೆ ಜಮೀನು ಮತ್ತು ಒಂದು ಮನೆ ಬಂದಿರುತ್ತದೆ. 1987 ರ ವಿಭಾಗದ ಪ್ರಕಾರ ಕಂದಾಯ ದಾಖಲೆಗಳು ಬದಲಾಗಿರುತ್ತವೆ. ಸರ್ವೆ ನಂ.81 ರಲ್ಲಿ ಅಂದಾಜು 10 ಗುಂಟೆ ಜಮೀನು ಬಂದಿರುತ್ತದೆ. ಅದಕ್ಕೆ ಚಕ್ಕುಬಂದಿ ಪೂರ್ವಕ್ಕೆ- ಅಕ್ಕಸಾಲಿಗರ ಲಕ್ಷ್ಮಯ್ಯ ಪಶ್ಚಿಮಕ್ಕೆ - ನಾಯಕರ ಕಪ್ಪಾಲಪ್ಪ ರ ಜಮೀನು , ಉತ್ತರಕ್ಕೆ – ಗುಟ್ಟೆ ದಕ್ಷಿಣಕ್ಕೆ ರೆಡ್ಡಿ ನರಸಪ್ಪ ಜಮೀನು. ಈ ಚಕ್ಕುಬಂದಿ ಅನ್ವಯ ನಾವು 3 ಜನ ಸಹ ಸರ್ವೆ ಮಾಡಿಸಿರುವುದಿಲ್ಲ. ಸರ್ವೆ ನಂ.82 ರಲ್ಲಿ ಅಂದಾಜು 1 ಎಕರೆ ಜಮೀನು ಬಂದಿರುತ್ತದೆ. ಈ ಸರ್ವೆ ನಂಬರ್ ದಾವೆಯಲ್ಲಿ ಸೇರಿಸಲಾಗಿದೆ. 1987 ರ ಪಾರಿಕತ್ ಪ್ರಕಾರ ಸರ್ವೆ ಮಾಡಿಸಿರುವುದಿಲ್ಲ. 1987 ರ ಪಾರಿಕತ್ ಆಗುವ

ಪೂರ್ವದಲ್ಲಿಯೇ ನಮ್ಮ ಹೆಸರಿಗೆ ಮುಟೇಷನ್ ಆಗಿತ್ತು. ಸದರಿ ಮುಟೇಷನ್ ನ್ಯಾಯಾಲಯಕ್ಕೆ ಕೊಟ್ಟಿರಬಹುದು. 1980 ರಲ್ಲಿ ಯಾವುದೇ ಮುಟೇಷನ್ ಆಗಿರುವುದಿಲ್ಲ ಹಾಗೂ 1987 ರಲ್ಲಿ ಯಾವುದೇ ಪಾರಿಕತ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಎಂದಿಗೂ ಹೆಬ್ಬೆಟ್ಟಿನ ಗುರುತು ಹಾಕುತ್ತಿರಲಿಲ್ಲ ಸಹಿ ಮಾತ್ರ ಮಾಡುತ್ತಿದ್ದರು ಎಂದರೆ ಸರಿಯಲ್ಲ. 2010 ರಲ್ಲಿ ನರಸಪ್ಪ ಬಿನ್ ನರಸಪ್ಪ ಜೀವಂತ ಇದ್ದರು. 2010 ರಲ್ಲಿ ಸದರಿ ನರಸಪ್ಪ ವಾದಿಯ ವಿರುದ್ದ ದಾವೆ ಸಲ್ಲಿಸಿದ್ದ ವಿಚಾರ ಗೊತ್ತು. ಸದರಿ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿದ್ದ ಎಂದರೆ ಸರಿಯಲ್ಲ. ಸಾಕ್ಷಿಯು ವಾದಿಯು ಮರ ಕಡಿದು ಹಾಕಿದ ಕಾರಣ ಸದರಿ ದಾವೆಯನ್ನು ಸಲ್ಲಿಸಿದ್ದ ಎಂದು ನುಡಿಯುತ್ತಾರೆ. ಸದರಿ ದಾವೆಯು ವಜಾ ಆಗಿದೆ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ಸದರಿ ಮರಗಳು ಒಟ್ಟು ಕುಟುಂಬಕ್ಕೆ ಸೇರಿದವು ಎಂದು ಆದೇಶ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಸತ್ಯಾಂಶ ಮರೆಮಾಚಿ ಆದೇಶ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳೂ ಎಂದಿಗೂ ಜಂಟಿ ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. 2017 ರಲ್ಲಿ ವಾದಿ ಬಂದು ಭಾಗ ಕೊಡುವಂತೆ ಕೇಳಿದರು ಎಂದರೆ ಸಾಕ್ಷಿಯು ನಾವು ಮೊದಲೇ ಭಾಗ ಮಾಡಿಕೊಂಡಿರುವುದು ಸರಿ ಇಲ್ಲ ಬೇರೆ ರೀತಿಯಾಗಿ ಭಾಗ ಮಾಡಿಕೊಳ್ಳೋಣ ಎಂದು ಹೇಳಿದ ಎಂದು ನುಡಿಯುತ್ತಾರೆ. ಆದ್ದರಿಂದ ವಾದಿಯು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾವಗಡ